**ಸಾಕ್ಷಿಗೆ ದಿನಾಂಕಃ12-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀಸವಾಲು :: ಶ್ರೀ. H.R.U ವಕೀಲರಿಂದ ::**

7. ನಿಪಿ-13 ರಲ್ಲಿ ಕಾಣುವ ಕಟ್ಟಡ ಸಿಮೆಂಟ್ ಇಟ್ಟಿಗೆಯಿಂದ ಕಟ್ಟಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮತ್ತೊಮ್ಮೆ ಮುಂದುವರಿದು, ಸಿಮೆಂಟ್ ಇಟ್ಟಿಗೆ ಅಲ್ಲ ಜಂಬಿಟ್ಟಿಗೆ ಎಂದು ನುಡಿಯುತ್ತಾರೆ. ನಿಪಿ-13 ರಿಂದ ನಿಪಿ-16 ರಲ್ಲಿರುವ ಭಾವ ಚಿತ್ರಗಳಲ್ಲಿ ಕಾಣುವ ಕಟ್ಟಡವನ್ನು ಸಿಮೆಂಟ್ ಇಟ್ಟಿಗೆಯಲ್ಲಿಯೇ ನಿರ್ಮಾಣ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-13 ರಿಂದ ನಿಪಿ-16 ರಲ್ಲಿಕಾಣುವ ಕಟ್ಟಡವನ್ನು ಸಿಮೆಂಟ್ ಇಟ್ಟಿಗೆಯಲ್ಲಿಯೇ ನಿರ್ಮಾಣಮಾಡಲಾಗಿದ್ದರೂ ಸಹ ನಾನು ಜಂಬಿಟ್ಟಿಗೆಯಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-16 ರಲ್ಲಿ ಕಾಣುವ ಕಟ್ಟಡದ ಹಿಂಭಾಗದಲ್ಲಿ ಜೋಡಿಸಲಾಗಿರುವ ಇಟ್ಟಿಗೆಯ ಬಣ್ಣ ಬೇರೆ ಬೇರೆಯಾಗಿದೇ ಅಲ್ಲವೇ ಎಂದರೆ ಸಾಕ್ಷಿಯು ಬಣ್ಣ ಬೇರೆಯಾಗಿದ್ದರೂ ಸಹ ಅದು ಜಂಬಿಟ್ಟಿಗೆಯೇ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-16 ರಲ್ಲಿ ಕಾಣುವ ಕಟ್ಟಡದ ಹಿಂಭಾಗದಲ್ಲಿರುವುದು ಜಂಬಿಟ್ಟಿಗೆ ಮತ್ತು ಕಟ್ಟಡವನ್ನು ಸಿಮೆಂಟ್ ಇಟ್ಟಿಗೆಯಲ್ಲಿಯೇ ನಿರ್ಮಾಣ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

8. ನಿಪಿ-1 ಕೆಳಕೊಪ್ಪ ಗ್ರಾಮದ ಸರ್ವೆ ನಂ.150 ಜಮೀನಿಗೆ ಸಂಬಂಧಿಸಿದ್ದು ಆಗಿರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿರುವ ಜಮೀನಿನ ಒಟ್ಟು ವಿಸ್ತೀರ್ಣ 25.29 ಗುಂಟೆ ಆಗಿರುತ್ತದೆ ಎಂದರೆ ಸರಿ. ಸದರಿ ಒಟ್ಟು ವಿಸ್ತೀರ್ಣ 25 ಎಕರೆ 29 ಗುಂಟೆಯ ಪೈಕಿ 24 ಎಕರೆ 19 ಗುಂಟೆ ಜಮೀನು ಸೊಪ್ಪಿನ ಬೆಟ್ಟ ಹಾಗೂ 1 ಎಕರೆ 10 ಗುಂಟೆ ಜಮೀನು ಆಶ್ರಯ ಯೋಜನೆ ನಿವೇಶನಕ್ಕೆ ಮೀಸಲಿಟ್ಟ ಜಾಗವಾಗಿರುತ್ತದೆ ಎಂದರೆ ಸರಿ. ವಾದಿಯ ಮನೆ ಸೊಪ್ಪಿನ ಬೆಟ್ಟಕ್ಕೆ ಮೀಸಲಿಟ್ಟಿರುವ 24 ಎಕರೆ 19 ಗುಂಟೆ ಜಮೀನಿನಲ್ಲಿ ಇದೆ.

9. ವಸತಿ ರಹಿತರಿಗೆ ಸರ್ಕಾರ ವಸತಿ ಕಲ್ಪಿಸಬೇಕೆಂಬ ಉದ್ದೇಶದಿಂದ ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚುತ್ತದೆ ಎಂದರೆ ಸರಿ. ಸದರಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವ ಕಾರ್ಯವನ್ನು ಸಂಬಂಧ ಪಟ್ಟ ಗ್ರಾಮ ಪಂಚಾಯಿತಿ ತೀರ್ಮಾನ ಮಾಡುತ್ತದೆ ಎಂದರೆ ಸರಿ. ಸರ್ವೆ ನಂ. 150 ರಲ್ಲಿ 1 ಎಕರೆ 10 ಗುಂಟೆ ಜಮೀನು ಆಶ್ರಯ ಯೋಜನೆ ನಿವೇಶನಕ್ಕೆ ಮೀಸಲಿಟ್ಟ ಜಾಗ ಅಡ್ಡಗದ್ದೆ ಗ್ರಾಮ -

ಪಂಚಾಯಿತಿಯ ವ್ಯಾಪ್ತಿಯೊಳಗೆ ಬರುತ್ತದೆ ಎಂದರೆ ಸರಿ. ನಾನು ಸದರಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯೊಳಗೆ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ಸದರಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯೊಳಗೆ ಅನೇಕ ವಸತಿ ರಹಿತರು ಇದ್ದಾರೆ ಎಂದರೆ ಸರಿ. ವಸತಿ ರಹಿತರು ನಿವೇಶನ ಹಂಚಿಕೆಗಾಗಿ ನಿಗದಿ ಪಡಿಸಿರುವ ದಾಖಲೆಗಳನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸಿದ ನಂತರ ಸದರಿ ಗ್ರಾಮ ಪಂಚಾಯಿತಿಯು ಅರ್ಹ ಪಲಾನುಭವಿಗಳನ್ನು ಆಯ್ಕೆ ಮಾಡುತ್ತದೆ ಎಂದರೆ ಸರಿ. ಗ್ರಾಮ ಪಂಚಾಯಿತಿಯ ಅರ್ಹ ಪಲಾನುಭವಿಗಳಿಗೆ ಜೇಷ್ಠತೆಯ ಆಧಾರದ ಮೇಲೆ ನಿವೇಶನಗಳನ್ನು ಹಂಚಿಕೆ ಮಾಡುತ್ತದೆ ಎಂದರೆ ಸರಿ.

10. ಅಡ್ಡಗದ್ದೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ವಸತಿ ರಹಿತರು ನಿವೇಶನ ಹಂಚಿಕೆಗಾಗಿ ಅರ್ಜಿ ಸಲ್ಲಿಸಿದವರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ. 150 ರಲ್ಲಿ 1 ಎಕರೆ 10 ಗುಂಟೆ ಜಮೀನು ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಕಾಯ್ದಿರಿಸಿದ ಜಾಗದಲ್ಲಿ ಯಾರಾದರೂ ಅತಿಕ್ರಮಿಸಿದರೆ ಅರ್ಹ ಪಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ಆಗುವುದಿಲ್ಲ ಅಲ್ಲವೇ ಎಂದರೆ ಸಾಕ್ಷಿಯು ಈಗಾಗಲೇ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ನುಡಿಯುತ್ತಾರೆ.

11. ಕೆಳಕೊಪ್ಪ ಗ್ರಾಮದ 1 ಎಕರೆ 10 ಗುಂಟೆ ಜಮೀನು ಆಶ್ರಯ ಯೋಜನೆ ನಿವೇಶನಕ್ಕೆ ಮೀಸಲಿಟ್ಟ ಜಾಗದಲ್ಲಿ ಎಷ್ಟು ಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ ಎಂಬ ವಿಚಾರ ನಿಮಗೆ ತಿಳಿದಿದೆಯೇ ಎಂದರೆ ಅಂದಾಜು ಸುಮಾರು 25 ಜನರಿಗೆ ನಿವೇಶನ ಹಂಚಿಕೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಬಡಾವಣೆ ಮಾಡಿದ ನಂತರ ಅರ್ಹ ಪಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಬೇಕಾಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಬಡಾವಣೆ ಮಾಡಲಾಗಿದೆ. ಪ್ರತಿವಾದಿ ಪಂಚಾಯಿತಿಯು ವಾದಿಗೆ ಸದರಿ ಜಮೀನಿನಲ್ಲಿ ನಿವೇಶನಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಅತಿಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವುದರಿಂದ ಅರ್ಹ ಪಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ತೊಂದರೆ ಆಗುತ್ತದೆ ಆದ್ದರಿಂದ ಅಕ್ರಮ ಕಟ್ಟಡ ನಿರ್ಮಾಣವನ್ನು ನಿಲ್ಲಿಸಬೇಕೆಂದು ನೋಟೀಸು ನೀಡಿರುತ್ತಾರೆ ಎಂದರೆ ಸುಳ್ಳು. ಸದರಿ ನೋಟೀಸನ್ನು ಪಂಚಾಯಿತಿಯು ನೀಡಿದ ನಂತರ ವಾದಿಯು ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯು ಈ ದಾವೆಯನ್ನು ಸಲ್ಲಿಸಿದ ಕಾರಣ ಪ್ರತಿವಾದಿ ಗ್ರಾಮ ಪಂಚಾಯಿತಿಯು ಬೇರೆ ಯಾವುದೇ ಅರ್ಹ -

ಫಲಾನುಭವಿಗಳಿಗೆ ಸದರಿ ಜಾಗದಲ್ಲಿ ಆಶ್ರಯ ನಿವೇಶನವನ್ನು ಹಂಚಿಕೆ ಮಾಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ.

12. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿಯು ಸದರಿ ದಾವೆಯ ಬಗ್ಗೆ ನನ್ನ ಗಮನಕ್ಕೆ ತಂದಿರುವುದಿಲ್ಲ. ವಾದಿಯ ಮನೆಯನ್ನು ಯಾರು ಮತ್ತು ಯಾವಾಗ ನಿರ್ಮಾಣ ಮಾಡಿದರು ಎಂದರೆ ಸಾಕ್ಷಿಯು ಸುಮಾರು 15-20 ವರ್ಷಗಳ ಹಿಂದೆ ವಾದಿಯೇ ಮನೆಯನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಿನ ನ್ಯಾಯಾಲಯಕ್ಕೆ ಬರುವಂತೆ ವಾದಿಯೇ ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ನನಗೆ ವಾದಿಯು ಪರಿಚಯಸ್ಥರಾಗಿರುವುದರಿಂದ ನ್ಯಾಯಾಲಯದಲ್ಲಿ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ಥಳದಲ್ಲಿ 15-20 ವರ್ಷಗಳಿಂದ ಮನೆ ಕಟ್ಟಿಕೊಂಡು ಅಲ್ಲಿಯೇ ವಾಸಿಸುತ್ತಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಈ ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಯ ವಿರುದ್ಧ ಪ್ರತಿಬಂಧಕಾಜ್ಞೆಯನ್ನು ಪಡೆದುಕೊಂಡ ನಂತರ ದಾವಾ ಆಸ್ತಿಯನ್ನು ಕಬಳಿಸಲು ಪ್ರಯತ್ನಿಸುತ್ತಿದ್ದಾರೆಂದರೆ ಸರಿಯಲ್ಲ.

13. ಅಡ್ಡಗದ್ದೆ ಗ್ರಾಮ ಪಂಚಾಯಿತಿಯ ಕಾರ್ಯಾಲಯದ ಎದುರಿಗೆ ವಾದಿಯ ತಂದೆಯ ಮತ್ತು ಅಣ್ಣನ ಮನೆ ಇದ್ದು ಅದೇ ಮನೆಯಲ್ಲಿ ವಾದಿ ತನ್ನ ಸಂಸಾರದೊಂದಿಗೆ ವಾಸ ಇದ್ದಾರೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಸಹ ವಾದಿ ತನ್ನ ಸಂಸಾರದೊಂದಿಗೆ ದಾವಾ ಸ್ಥಳದಲ್ಲಿ ವಾಸ ಇದ್ದಾರೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

SD/-

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.